## ಕರ್ನಾಟಕ ಸರ್ಕಾರ

ಸಂಖ್ಯೆ: ಸಕಇ 26 ಎಸ್‌ಪಿಎ 2018

ಕರ್ನಾಟಕ ಸರ್ಕಾರದ ಸಚಿವಾಲಯ,<br>
ವಿಕಾಸಸೌಧ,<br>
ಬೆಂಗಳೂರು,ದಿನಾಂಕ: 04.01.2020

### ಅಧಿಸೂಚನೆ

ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ. ಮತ್ತು ನಿರ್ಮೂಲನೆ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ ಸಂಖ್ಯೆ 46) ರ 1ನೇ ಪ್ರಕರಣ (2)ನೇ ಉಪ-ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಸದರಿ ಅಧಿನಿಯಮವು ದಿನಾಂಕ: 04.01.2020 ರಿಂದ ಜಾರಿಗೆ ಬರತಕ್ಕದೆಂದು ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

(ಶಂಭುಲಿಂಗಯ್ಯ)<br>
ಸರ್ಕಾರದ ಉಪ ಕಾರ್ಯದರ್ಶಿ-1<br>
ಸಮಾಜ ಕಲ್ಯಾಣ ಇಲಾಖೆ

PR-100

## GOVERNMENT OF KARNATAKA

No.SWD 26 SPA 2018

Karnataka Government Secretariat,<br>
Vikasa Soudha,<br>
Bangalore, dated:04.01.2020

### NOTIFICATION

In exercise of powers conferred under section 1(2) of the KARNATAKA PREVENTION AND ERADICATION OF

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



INHUMAN EVIL PRACTICES AND BLACK MAGIC ACT 2017 (Karnataka Act No.46 of 2017) the government of Karnataka hereby appoints that the said Act shall come into force with effect from 04-01-2020.

By Order and in the name
Of the Governor of Karnataka

(Shambulingaiah)
Deputy Secretary to Govt-1,
Social Welfare Department

PR-101

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE Digitally signed by SUNIL GARDE Date: 2020.02.06 19:19:48 +05'30'

ಕರ್ನಾಟಕ ಸರ್ಕಾರ

ಸಂಖ್ಯೆ: ಸಕಇ 26 ಎಸ್‌ಪಿಎ 2018

ಕರ್ನಾಟಕ ಸರ್ಕಾರ ಸಚಿವಾಲಯ
ವಿಕಾಸಸೌಧ,
ಬೆಂಗಳೂರು,ದಿನಾಂಕ:04.02.2020

ಅಧಿಸೂಚನೆ

ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನೆ ಅಧಿನಿಯಮ 2017 (ಕರ್ನಾಟಕ ಕಾಯ್ದೆ ಸಂಖ್ಯೆ:46/2017)ರ ಕಲಂ 6ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ರಾಜ್ಯ ಸರ್ಕಾರ ಈ ಅಧಿಸೂಚನೆ ಮೂಲಕ (1) ಕರ್ನಾಟಕ ಸರ್ಕಾರದ ಒಳಾಡಳಿತ ಇಲಾಖೆಯಡಿ ನಿಶ್ಚಯಿಸಿದ ವಿಶೇಷ ಕಾರ್ಯ ಪೊಲೀಸ್ ಠಾಣೆಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ಪೊಲೀಸ್ ಠಾಣೆಗಳನ್ನು ಮೇಲ್ಕಂಡ ಕಾಯ್ದೆ ಸಲುವಾಗಿ **'ಪೊಲೀಸ್ ಠಾಣೆ'** ಗಳೆಂದು ಪ್ರಕಟಿಸಲಾಗಿದೆ.

(2) ರಾಜ್ಯದಲ್ಲಿರುವ ಈ ಪೊಲೀಸ್ ಠಾಣೆಗಳ ಪೊಲೀಸ್ ಇನ್ಸ್‌ಪೆಕ್ಟರ್‌ಗಳನ್ನು ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ಸದರಿ ಕಾಯ್ದೆ ಕಲಂ 6 ಮತ್ತು 7ರಂತೆ ಕರ್ತವ್ಯಗಳನ್ನು ನಿರ್ವಹಿಸಲು **'ಜಾಗೃತಾಧಿಕಾರಿ'** ಗಳೆಂದು ನೇಮಿಸಲಾಗಿದೆ.

ಈ ಅಧಿಸೂಚನೆಯು ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ.

ಈ ಹಿಂದೆ ದಿನಾಂಕ:25.06.2019ರಂದು ಈ ಬಗ್ಗೆ ಹೊರಡಿಸಿದ ಅಧಿಸೂಚನೆಯನ್ನು ಹಿಂಪಡೆಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
(ಶಂಭುಲಿಂಗಯ್ಯ)
ಸರ್ಕಾರದ ಉಪ ಕಾರ್ಯದರ್ಶಿ-1,
ಸಮಾಜ ಕಲ್ಯಾಣ ಇಲಾಖೆ.

GOVERNMENT OF KARNATAKA

No.SWD 26 SPA 2018

Karnataka Government Secretariat,
Vikasa Soudha,
Bangalore, dated:04.02.2020

NOTIFICATION

By Exercising the powers conferred under section 6 of THE KARNATAKA PREVENTION AND ERADICATION OF INHUMAN EVIL PRACTICES AND BLACK MAGIC ACT 2017 (Karnataka Act No.46 of 2017), the state government hereby (1)

notify all the police stations in the state of Karnataka, except those designated for the special purpose by the Home Department, Government of Karnataka, as 'Police Stations' for the purpose of above said act and:

(2) appoint all the Inspectors of Police incharge of these police stations in the state, **as 'vigilance officers'** to discharge the duties within their jurisdiction, under section 6 & 7 of the above said Act.

This notification will come in to force from the date of publication in the official gazette.

The notification issued earlier in this regard on 25.06.2019 is here by withdrawn.

By Order and in the name
Of the Governor of Karnataka

(Shambulingaiah)
Deputy Secretary to Govt-1,
**Social Welfare Department.**

PR-105

**ಕರ್ನಾಟಕ ಸರ್ಕಾರ**

ಸಂಖ್ಯೆ ನಅಇ 43 ಎಂಎಲ್ಆರ್ 2019

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ
ಬೆಂಗಳೂರು,ದಿನಾಂಕ:12.02.2020

**ಅಧಿಸೂಚನೆ**

ಬಳ್ಳಾರಿ ಜಿಲ್ಲೆ ಕಂಪ್ಲಿ ಪುರಸಭೆಯ ಅಧ್ಯಕ್ಷ/ಉಪಾಧ್ಯಕ್ಷರ ಅವಧಿಯು ದಿನಾಂಕ 27.12.2019ಕ್ಕೆ ಮುಕ್ತಾಯವಾಗಲಿದ್ದು, ಯಾವುದೇ ಚುನಾಯಿತ ಆಡಳಿತ ಮಂಡಳಿ ಇಲ್ಲದೇ ಇರುವುದರಿಂದ, ಕರ್ನಾಟಕ ಪುರಸಭೆ ಅಧಿನಿಯಮ 1964ರ ಸೆಕ್ಷನ್ 315ರನ್ವಯ ಆಡಳಿತಾತ್ಮಕ ಹಿತದೃಷ್ಟಿಯಿಂದ ಮುಂದಿನ ಹೊಸ ಚುನಾಯಿತ ಕೌನ್ಸಿಲ್ ಅಸ್ಥಿತ್ವಕ್ಕೆ ಬರುವವರೆಗೂ ಕಾರ್ಯನಿರ್ವಹಣೆಗಾಗಿ ಆಡಳಿತಾಧಿಕಾರಿಗಳನ್ನು ನೇಮಕ ಮಾಡಬೇಕಾಗಿರುತ್ತದೆ.

| | | | | |
|---|---|---|---|---|
| 30 | ಗ್ರೂಪ್-ಡಿ (ರೂ.17000-28950) | 467 | 1. ಶೇ. 90ರಷ್ಟು ನೇರ ನೇಮಕಾತಿ ಮುಖಾಂತರ – ಕರ್ನಾಟಕ ನಾಗರೀಕ ಸೇವಾ (ಸ್ವರ್ಧಾತ್ಮಕ ಪರೀಕ್ಷೆ ಮತ್ತು ಆಯ್ಕೆಯ ಮುಖಾಂತರ ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು, 2006ರನ್ವಯ.<br>ಮತ್ತು<br>2. ಶೇ.10ರಷ್ಟು – ರಾಜ್ಯ ಸಿವಿಲ್ ಸೇವೆಯ ಇತರೆ ಇಲಾಖೆಗಳ ತತ್ಸಮಾನ ವೃಂದದ ನೌಕರರ ನಿಯೋಜನೆ ಮೂಲಕ. | ನೇರ ನೇಮಕಾತಿಗಾಗಿ:<br>ಕರ್ನಾಟಕ ನಾಗರೀಕ ಸೇವಾ (ಸ್ವರ್ಧಾತ್ಮಕ ಪರೀಕ್ಷೆ ಹಾಗೂ ಆಯ್ಕೆ ಮುಖಾಂತರ ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು, 2006ರನ್ವಯ. |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಹಿ/-

(ಎಲ್.ಕೆ. ಅತೀಕ್)

ಸರ್ಕಾರದ ಪ್ರಧಾನ ಕಾರ್ಯದರ್ಶಿ

ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

PR-166

## ಕರ್ನಾಟಕ ಸರ್ಕಾರ

ಸಂಖ್ಯೆ: ಸಕಇ 26 ಎಸ್‌ಪಿಎ 2018(ಭಾಗ)

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ,
ಬೆಂಗಳೂರು, ದಿನಾಂಕ:08.05.2020

## ಅಧಿಸೂಚನೆ

### ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನೆ ನಿಯಮಗಳು, 2020

ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನೆ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ ಸಂಖ್ಯೆ 46)ರ 12 ಮತ್ತು 13ನೇ ಪ್ರಕರಣಗಳಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನೆ ನಿಯಮಗಳು, 2020ರ ಕರಡು ಅಧಿಸೂಚನೆ ಸಂಖ್ಯೆ: ಸಕಇ 26 ಎಸ್‌ಪಿಎ 2018(ಭಾಗ), ದಿನಾಂಕ:07.01.2020ರಂದು ಸದರಿ ಅಧಿನಿಯಮದ 13ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ಅಗತ್ಯಪಡಿಸಲಾದಂತೆ, ಅದರಿಂದ ಬಾಧಿತರಾಗುವ ಸಂಭವವಿರುವ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ದಿನಾಂಕ:13.02.2020ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ, ಆಕ್ಷೇಪಣೆ ಅಥವಾ ಸಲಹೆಯನ್ನು ಸ್ವೀಕರಿಸಲು 15 ದಿನಗಳ ಕಾಲಾವಕಾಶ ನೀಡಲಾಗಿದ್ದು, ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳು ಸ್ವೀಕೃತವಾಗಿರುವುದಿಲ್ಲ.

ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನೆ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ ಸಂಖ್ಯೆ 46)ರ 12 ಮತ್ತು 13ನೇ ಪ್ರಕರಣಗಳಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಕೆಳಕಂಡಂತೆ ನಿಯಮಗಳನ್ನು ರೂಪಿಸಲಾಗಿದೆ.

## ನಿಯಮಗಳು

1. **ಹೆಸರು ಮತ್ತು ಆರಂಭ;** (1) ಈ ನಿಯಮಗಳನ್ನು ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನೆ ನಿಯಮಗಳು, 2020 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಸರ್ಕಾರಿ ರಾಜ್ಯಪತ್ರದಲ್ಲಿ ಅವುಗಳ ಅಂತಿಮ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು:–** (1) ಈ ನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) **"ಅಧಿನಿಯಮ"** ಎಂದರೆ, ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನೆ ಅಧಿನಿಯಮ, 2017.

(ಬಿ) **"ನೋಡಲ್ ಇಲಾಖೆ" ಎಂದರೆ,** ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ; ಮತ್ತು

(ಸಿ) **"ಜಾಗೃತ ಅಧಿಕಾರಿಗಳು"** ಎಂದರೆ, ಅಧಿನಿಯಮದ 6ನೇ ಪ್ರಕರಣದಡಿ ನಿಯುಕ್ತನಾದ ಜಾಗೃತ ಅಧಿಕಾರಿ.

(2) ಈ ನಿಯಮದಲ್ಲಿ ಬಳಸಿರುವ ಆದರೆ ಪರಿಭಾಷಿಸದಿರುವ ಎಲ್ಲಾ ಪದಗಳು ಮತ್ತು ಪದಾವಳಿಗಳು ಅಧಿನಿಯಮದಲ್ಲಿ ಅವುಗಳಿಗೆ ಅನುಕ್ರಮವಾಗಿ ನೀಡಲಾದ ಅರ್ಥಗಳನ್ನೇ ಹೊಂದಿರತಕ್ಕದ್ದು.

3. **ಅರಿವು ಕಾರ್ಯಕ್ರಮ:–** (1) ಅಧಿನಿಯಮದ 12ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ಅಮಾನವೀಯ ದುಷ್ಟ ಪದ್ಧತಿಗಳ ಮತ್ತು ವಾಮಾಚಾರದ ದುಷ್ಪರಿಣಾಮಗಳ ಕುರಿತು ಸಾರ್ವಜನಿಕರಲ್ಲಿ ಅರಿವನ್ನುಂಟು ಮಾಡಲು ಹಾಗೂ ಹಾನಿಗೊಳಗಾದ ಸಂತ್ರಸ್ತರಿಗೆ ತಾಲ್ಲೂಕು ಮ್ಯಾಜಿಸ್ಟ್ರೇಟರು, ಆಡಳಿತ, ಉಪ–ವಿಭಾಗೀಯ ಮ್ಯಾಜಿಸ್ಟ್ರೇಟ್ ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ನೋಡಲ್ ಇಲಾಖೆಯ ಜಿಲ್ಲಾ ಹಾಗೂ ತಾಲ್ಲೂಕು ಅಧಿಕಾರಿಗಳನ್ನೊಳಗೊಂಡ ಜಿಲ್ಲಾಡಳಿತದ ಮೂಲಕ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯಕೀಯ ಪರಿಹಾರವನ್ನು ಒದಗಿಸಲು ನೋಡಲ್ ಇಲಾಖೆಯು ಅರಿವು ಕಾರ್ಯಕ್ರಮಗಳನ್ನು ಕೈಗೊಳ್ಳತಕ್ಕದ್ದು.

(2) **ಜಾಗೃತ ಅಧಿಕಾರಿಯು,** ತನ್ನ ಅಧಿಕಾರ ವ್ಯಾಪ್ತಿಯ ಪ್ರದೇಶದಲ್ಲಿ ಅಮಾನವೀಯ ದುಷ್ಟ ಪದ್ಧತಿಗಳು ಮತ್ತು ವಾಮಾಚಾರ ದುಷ್ಪರಿಣಾಮಗಳ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳತಕ್ಕದ್ದು ಮತ್ತು ಹಾನಿಗೊಳಗಾದ ಸಂತ್ರಸ್ತರಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯಕೀಯ ಪರಿಹಾರವನ್ನು ಒದಗಿಸತಕ್ಕದ್ದು. ಜಿಲ್ಲಾಡಳಿತ ಎಂದರೆ, ತಾಲ್ಲೂಕು ಮ್ಯಾಜಿಸ್ಟ್ರೇಟ್, ಉಪ–ವಿಭಾಗೀಯ ಮ್ಯಾಜಿಸ್ಟ್ರೇಟ್ ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ಸಮಾಜ ಕಲ್ಯಾಣ ಇಲಾಖೆಯ ಜಿಲ್ಲಾ ಹಾಗೂ ತಾಲ್ಲೂಕು ಅಧಿಕಾರಿಗಳು ಇದಕ್ಕೆ ಸಂಬಂಧಿಸಿದಂತೆ ಜಾಗೃತಿ ಅಧಿಕಾರಿಗಳಿಗೆ ಹಣಕಾಸು ಮತ್ತು ಇತರೆ ನೆರವನ್ನು ನೀಡತಕ್ಕದ್ದು.

(3) ಹಿರಿಯ ಪೊಲೀಸ್ ಅಧಿಕಾರಿಗಳು ಎಂದರೆ, ಜಿಲ್ಲಾ ಪೊಲೀಸ್ ಅಧೀಕ್ಷಕರು, ಪೊಲೀಸ್ ಕಮೀಷನರೇಟ್‌ಗಳಲ್ಲಿರುವ ಪೊಲೀಸ್ ಉಪ–ಆಯುಕ್ತರುಗಳು ಮತ್ತು ಪೊಲೀಸ್ ಮಹಾ ನಿರೀಕ್ಷಕರ ದರ್ಜೆಯಲ್ಲಿರುವಂತ ಹಿರಿಯ ಪೊಲೀಸ್ ಅಧಿಕಾರಿಗಳು, ಈ ಅಧಿನಿಯಮದ

ಪರಿಣಾಮಕಾರಿ ಅನುಷ್ಠಾನಕ್ಕಾಗಿ ಅಧಿಸೂಚಿತ ಪೊಲೀಸ್ ಠಾಣೆಗಳ ಜಾಗೃತ ಅಧಿಕಾರಿಗಳು ಮತ್ತು ಇನ್ಸ್‌ಪೆಕ್ಟರ್‌ಸ್‌ಗಳಿಗೆ ಮೇಲ್ವಿಚಾರಣೆ ಮಾಡತಕ್ಕದ್ದು ಹಾಗೂ ಮಾರ್ಗದರ್ಶನ ನೀಡತಕ್ಕದ್ದು.

(4) ಜಾಗೃತ ಅಧಿಕಾರಿಗಳು ಮತ್ತು ಅಧಿಸೂಚಿತ ಪೊಲೀಸ್ ಠಾಣೆಗಳ ಇನ್ಸ್‌ಪೆಕ್ಟರ್‌ಗಳು ಪುನರವಲೋಕನ ಮತ್ತು ಮೇಲ್ವಿಚಾರಣೆಯ ಉದ್ದೇಶಕ್ಕಾಗಿ ಈ ಅಧಿನಿಯಮದ ಅಡಿಯಲ್ಲಿನ ಪ್ರಕರಣಗಳ ವಿವರಗಳ ಬಗ್ಗೆ ಅವರ ಹಿರಿಯ ಅಧಿಕಾರಿಗಳಿಗೆ ವರದಿ ಮಾಡತಕ್ಕದ್ದು.

(5) ಅಧಿನಿಯಮದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮಾನ್ಯ ಸಚಿವರು, ಸಮಾಜ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಗೃಹ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಮತ್ತು ಇತರೆ ಇಲಾಖೆಗಳ ಅಧಿಕಾರಿಗಳೊಂದಿಗೆ (ಅಗತ್ಯವಿದ್ದಲ್ಲಿ) ಅರ್ಧ ವಾರ್ಷಿಕ ಮನರವಲೋಕನ ಸಭೆಯನ್ನು ನಡೆಸಬಹುದು.

(6) ರಾಜ್ಯದ ಪೊಲೀಸ್ ಮಹಾ ನಿರ್ದೇಶಕರು ಮತ್ತು ಪೊಲೀಸ್ ಮಹಾ ನಿರೀಕ್ಷಕರು ಅರ್ಧವಾರ್ಷಿಕ ಪುನರವಲೋಕನ ಸಭೆಯ ಉದ್ದೇಶಕ್ಕಾಗಿ ಗೃಹ ಇಲಾಖೆಯ ಮೂಲಕ ನೋಡಲ್ ಇಲಾಖೆಗೆ ಅಂದರೆ ಸಮಾಜ ಕಲ್ಯಾಣ ಇಲಾಖೆಗೆ ಅನುಬಂಧ-1ರ ನಮೂನೆಯಲ್ಲಿ ದಾಖಲಾದ ಪ್ರಕರಣಗಳ ಕ್ರೋಢೀಕೃತ ಜಿಲ್ಲಾವಾರು ಮಾಹಿತಿಯನ್ನು ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶಂಭುಲಿಂಗಯ್ಯ)
ಸರ್ಕಾರದ ಉಪ ಕಾರ್ಯದರ್ಶಿ-1
ಸಮಾಜ ಕಲ್ಯಾಣ ಇಲಾಖೆ

## ಅನುಬಂಧ-1

**ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನೆ ನಿಯಮಗಳು, 2020ರ ಅಡಿಯಲ್ಲಿ ಬರುವ ಪ್ರಕರಣಗಳ ಸ್ಥಿತಿಗತಿಗಳ ಅರ್ಧವಾರ್ಷಿಕ ವಿವರಣಾ ಪಟ್ಟಿ.**

ಅವಧಿ ____________

| ಕ್ರ. ಸಂ | ಜಿಲ್ಲೆ | ನೋಂದಾಯಿತ ಪ್ರಕರಣಗಳ ಸಂಖ್ಯೆ | ಅವುಗಳಲ್ಲಿ | | | | | | |
|---|---|---|---|---|---|---|---|---|---|
| | | | ಯು/ಐ | ಯು/ಟಿ | ಸಿ/ಎಫ್ | ಅಪರಾಧಿ ಎಂದು ನಿರ್ಣೀತರಾದವರು | ಖುಲಾಸೆಗೊಂಡವರು | ಬಿ-ವರದಿ | ಇತರೆ |

ಟಿಪ್ಪಣಿ : ಯು/ಐ – ತನಿಖಾಧೀನ
ಯು/ಟಿ – ವಿಚಾರಣಾಧೀನ
ಸಿ/ಎಫ್ – ಸಲ್ಲಿಸಲಾದ ದೋಷಾರೋಪಣಾ ಪಟ್ಟಿ

(ಶಂಭುಲಿಂಗಯ್ಯ)
ಸರ್ಕಾರದ ಉಪ ಕಾರ್ಯದರ್ಶಿ-1
ಸಮಾಜ ಕಲ್ಯಾಣ ಇಲಾಖೆ

**GOVERNMENT OF KARNATAKA**

No.SWD 26 SPA 2018(Part) Karnataka Government Secretariat,
Vikasa Soudha,
Bangalore, dated:08.05.2020

## NOTIFICATION

## THE KARNATAKA PREVENTION AND ERADICATION OF INHUMAN EVIL PRACTICES AND BLACK MAGIC RULES, 2020

Whereas the draft of **THE KARNATAKA PREVENTION AND ERADICATION OF INHUMAN EVIL PRACTICES AND BLACK MAGIC RULES, 2020** was published as required by sub section (1) of section 13 of section 12 and 13 of the **THE KARNATAKA PREVENTION AND ERADICATION OF INHUMAN EVIL PRACTICES AND BLACK MAGIC Act, 2017 (Karnataka Act no.46 of 2017)** in Notification No. SWD 26 SPA 2018(Part), Dated:07.01.2020 in part 4(a) of No.47 of the Karnataka Gazette, Dated:13.02.2020 inviting objections or suggestions from all persons likely to be affected within fifteen days from the date of its publication in the Official Gazette.

And whereas the said Gazette was made available to public on 13.02.2020.

And whereas objections or suggestions have not been received.

Now, therefore in exercise of the powers conferred by sub section (1) of section 13 of section 12 and 13 of the KARNATAKA PREVENTION AND ERADICATION OF INHUMAN EVIL PRACTICES AND BLACK MAGIC Act, 2017 (Karnataka Act no.46 of 2017) the Government of Karnataka hereby makes the following rules namely:-

## RULES

1. **Title and commencement** (1) These rules may be called **THE KARNATAKA PREVENTION AND ERADICATION OF INHUMAN EVIL PRACTICES AND BLACK MAGIC RULES, 2020**

   **(2) They shall come in to force from the date of their final publications in the official gazette.**

2. **Definitions:-**(1) In these rules unless the context otherwise requires,–

**(a)** "Act" means **THE KARNATAKA PREVENTION AND ERADICATION OF INHUMAN EVIL PRACTICES AND BLACK MAGIC Act, 2017**

**(b) "Nodal Department" means the Department of Social Welfare, Government of Karnataka; and**

**(c) "Vigilance Officers"** means the vigilance Officers oppointed under section 6 of the act.

(2) All otherwords and expressions used in these Rules, but not defined shall have the same meaning as assigned to them in the Act.

3. **Awareness programme**:- (1) The Nodal Department shall undertake appropriate awareness programme to bring awareness among the public about the ill effects of the inhuman, evil practices and black magic and provide medical relief to the injured victims in government hospitals, asper the provision of section 12 of the Act through district administration consisting of Taluka Magistrate, Sub-Divisional Magistrate and District Magistrate and District and Taluka Officers of the Nodal Department. Besides the nodal department shall also extend necessary financial and other assistance to the district administration in this regard.

(2) **The Vigilance Officer** shall also undertake the awareness programme in his jurisdiction to bring the awareness among the public about the ill effects of the inhuman, evil practices and black magic and provide medical relief to the injured victims in government hospitals. The district administration i.e., Taluka Magistrate, Sub-Divisional Magistrate and District Magistrate and District and Taluka Officers of the Social Welfare Department have to extend the financial and other assistance to the vigilance officers in this regard.

(3) **The senior police officers** like district superintendent of police, deputy commissioners of the police in the police commissionarates and Inspector General of Police of the ranges shall supervise and guide the vigilance officers and inspectors of notified police stations for effective implementation of the Act.

(4) **The vigilance officers** and the inspectors of notified police stations shall report to their higher officers, the details of the cases under the Act for the purpose of the review and monitoring.

(5) **A half-yearly review** meeting may be held under the chairmanship of the Hon`ble Minister for Social Welfare Department regarding the

implementation of the Act with the Officers of Home Department, Social Welfare Department and Officers of other Departments (if required).

(6) **The Director General and Inspector General of Police of the State** shall submit the consolidated District-wise information of the cases registered etc., in the Format, Annexure-1 to Nodal Department i.e., Social Welfare Department through Home Department for the purpose of half-yearly review meeting.

By Order and in the name
Of the Governor of Karnataka

(Shambulingaiah)
Deputy Secretary to Govt-1,
Social Welfare Department

## ANNEXURE-1

## HALF-YEARLY STATEMENT OF THE STATUS OF CASES UNDER THE KARNATAKA PREVENTION AND ERADICATION OF INHUMAN EVIL PRACTICES AND BLACK MAGIC RULES, 2020

Period-------------------

| Sl No | District | No. of cases registered | Out of which | | | | | | |
|---|---|---|---|---|---|---|---|---|---|
| | | | U/I | U/T | C/F | Convicted | Ac-quitted | B-Report | Other |
| | | | | | | | | | |

Note: U/I – Under investigation

U/T – Under trail

C/F – Charge sheet filed

(Shambulingaiah)
Deputy Secretary to Govt-1,
Social Welfare Department

PR-167

RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| ಭಾಗ-IVA | ಬೆಂಗಳೂರು, ಗುರುವಾರ, ಡಿಸೆಂಬರ್ ೦೭, ೨೦೧೭ (ಮಾರ್ಗಶಿರ ೧೬, ಶಕ ವರ್ಷ ೧೯೩೯) | ನಂ. ೧೧೮೬ |
|---|---|---|
| Part-IVA | Bengaluru, Thursday, December 07, 2017 (Margashira 16, Shaka Varsha 1939) | No. 1186 |


**ಸಂಸದೀಯ ವ್ಯವಹಾರಗಳ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಸಂವ್ಯಶಾಇ 49 ಶಾಸನ 2017, ಬೆಂಗಳೂರು, ದಿನಾಂಕ: 07.12.2017**

ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನೆ ವಿಧೇಯಕ, 2017ಕ್ಕೆ 2017ರ ಡಿಸೆಂಬರ್ ತಿಂಗಳ 6ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2017ರ ಕರ್ನಾಟಕ ಅಧಿನಿಯಮ ಸಂಖ್ಯೆ: 46 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

**2017ರ ಕರ್ನಾಟಕ ಅಧಿನಿಯಮ ಸಂಖ್ಯೆ: 46**

(2017ರ ಡಿಸೆಂಬರ್ ತಿಂಗಳ ಏಳನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನೆ ಅಧಿನಿಯಮ, 2017

(2017ರ ಡಿಸೆಂಬರ್ ತಿಂಗಳ ಆರನೇ ದಿನಾಂಕದಂದು ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ದುಷ್ಟ ಮತ್ತು ದುರಾಚಾರಗಳಿಂದ (sinister) ಸಮಾಜದಲ್ಲಿನ ಸಾಮಾನ್ಯ ಜನರನ್ನು ರಕ್ಷಿಸುವ ದೃಷ್ಟಿಯಿಂದ ಸಮಾಜದ ಸಾಮಾನ್ಯ ಜನರನ್ನು ಶೋಷಿಸುವ ಮತ್ತು ಅದರಿಂದಾಗಿ ಸಮಾಜದ ಸಾಮಾಜಿಕ ವ್ಯವಸ್ಥೆಯನ್ನೇ ಹಾಳು ಮಾಡುವ ದುರಾಚಾರದಲ್ಲಿ ವಿಶ್ವಾಸ ಹುಟ್ಟಿಸಿ ಮೋಸ ಮಾಡುವವರು (Conmen) ಮತ್ತು ಮಾಟಗಾರರು ಸಾಮಾನ್ಯವಾಗಿ ವಾಮಾಚಾರವೆಂದು ಕರೆಯಲಾಗುವ ಅತೀಂದ್ರಿಯ ಅಥವಾ ಮೋಡಿ ಶಕ್ತಿಗಳು ಅಥವಾ ದುಷ್ಟ ಶಕ್ತಿಗಳು ಎನ್ನಲ್ಪಡುವ ಹೆಸರಿನಲ್ಲಿ ಪ್ರಸಾರವಾಗುತ್ತಿರುವ ಮತ್ತು ಮಾಡಲಾಗುತ್ತಿರುವ ಅಮಾನವೀಯ, ದುಷ್ಟ ಮತ್ತು ದುರಾಚಾರ ಪದ್ಧತಿಗಳ ವಿರುದ್ಧ ಸಮರ ಸಾರುವುದಕ್ಕಾಗಿ ಮತ್ತು ಅವುಗಳನ್ನು ನಿರ್ಮೂಲನ ಮಾಡುವುದಕ್ಕಾಗಿ ಹಾಗೂ ಸಮಾಜದಲ್ಲಿ ಜಾಗೃತಿ ಮೂಡಿಸುವುದು. ಈ ಅರಿವನ್ನು ಮೂಡಿಸುವುದಕ್ಕೆ ಹಾಗೂ ಆರೋಗ್ಯಕರ ಮತ್ತು ಸುರಕ್ಷಿತ ಸಾಮಾಜಿಕ ಪರಿಸರವನ್ನು ಸೃಷ್ಟಿಸುವುದಕ್ಕಾಗಿ ಹಾಗೂ ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಒಂದು ಅಧಿನಿಯಮ.

ಅಮಾನವೀಯ, ದುಷ್ಟ ಮತ್ತು ದುರಾಚಾರ ಪದ್ಧತಿಗಳು ಮತ್ತು ವಾಮಾಚಾರಗಳು ಹಾಗೂ ದುಷ್ಟಶಕ್ತಿಯಿಂದಾಗಿ, ಮೋಸ ಮಾಡುವವರ ಕೈಯಲ್ಲಿ ಸಿಕ್ಕ ಸಮಾಜದಲ್ಲಿನ ಸಾಮಾನ್ಯ ಜನರು ಶೋಷಣೆಗೆ ಒಳಗಾದ ಬಹಳಷ್ಟು ಪ್ರಕರಣಗಳು ಬೆಳಕಿಗೆ ಬರುತ್ತಿರುವುದರಿಂದ ಮತ್ತು ರಾಜ್ಯದಲ್ಲಿ ಸಾರ್ವಜನಿಕ ಅಭಿಪ್ರಾಯವನ್ನು ಪುರಸ್ಕರಿಸಲು ಅಮಾನವೀಯ, ದುಷ್ಟ ಪದ್ಧತಿಗಳು ಹಾಗೂ ವಾಮಾಚಾರಗಳ ಪ್ರತಿಬಂಧ ಮತ್ತು ನಿರ್ಮೂಲನೆ ಮಾಡಬೇಕಾದುದರಿಂದ;

ಮತ್ತು ಮೇಲೆ ಹೇಳಲಾದ ಕಾರಣಗಳಿಗಾಗಿ ಮೂಲ ಸಾಮಾಜಿಕ ವ್ಯವಸ್ಥೆಗೆ ಹಾಗೂ ನಂಬಿಕಾರ್ಹವಾದ ಮತ್ತು ವೈಜ್ಞಾನಿಕ ವೈದ್ಯಕೀಯ ಪರಿಹಾರಗಳು ಮತ್ತು ಚಿಕಿತ್ಸೆಗಳಲ್ಲಿ ಸಾಮಾನ್ಯ ಜನರ ನಂಬಿಕೆಗಳನ್ನು ಹಾಳು ಮಾಡಿ ಭೀತಿಯುಂಟು ಮಾಡುತ್ತಿರುವ ಮಾಟಗಾರರು ಮತ್ತು ಮಂತ್ರವಾದಿಗಳು ತಾವು ಐಂದ್ರಜಾಲಿಕ ಅಥವಾ ಪವಾಡ ಸದೃಶ ಪರಿಹಾರಗಳು

ಅಥವಾ ಶಕ್ತಿಗಳನ್ನು ಹೊಂದಿರುವುದಾಗಿ ಹೇಳಿಕೊಂಡು ಹಾಗೂ ಸಮಾಜ ವಿರೋಧಿ ಹಾನಿಕಾರಕ ಚಟುವಟಿಕೆಗಳು ಮತ್ತು ಅವರ ದುರಾಚಾರ ಪದ್ಧತಿಗೆ ಬಲಿಯಾಗುತ್ತಿರುವ ಸಾಮಾನ್ಯ ಜನರನ್ನು ರಕ್ಷಣೆ ಮಾಡುವುದಕ್ಕಾಗಿ ಹಾಗೂ ಅಂಥ ದುಷ್ಟ ಶಕ್ತಿಗಳನ್ನು ಮತ್ತು ಈ ಹಾನಿಕಾರಕ ಪದ್ಧತಿಗಳು, ರೂಢಿಗಳು, ವಾಮಾಚಾರ ಹಾಗೂ ಅಂಥ ಇತರ ಅಮಾನವೀಯ, ದುಷ್ಟ, ದುರಾಚಾರ ಪದ್ಧತಿಗಳನ್ನು ಪ್ರತಿಬಂಧಿಸುವುದಕ್ಕಾಗಿ ಸರ್ಕಾರವು ಯುಕ್ತವಾದ ಕಾನೂನು ಮತ್ತು ಸಾಮಾಜಿಕ ಕ್ರಮಗಳನ್ನು ತೆಗೆದುಕೊಳ್ಳುವುದು ಅತ್ಯಂತ ಅವಶ್ಯವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು.

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನೆ ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು.–** (1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಸಂಹಿತೆ" ಎಂದರೆ, ದಂಡ ಪ್ರಕ್ರಿಯಾ ಸಂಹಿತೆ, 1973 (1974ರ ಕೇಂದ್ರ ಅಧಿನಿಯಮ 02);

(ಬಿ) "ಸರ್ಕಾರ" ಎಂದರೆ, ಕರ್ನಾಟಕ ಸರ್ಕಾರ;

(ಸಿ) "ಅಮಾನವೀಯ, ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ" ಎಂದರೆ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ಕೃತ್ಯವನ್ನು, ಯಾವೊಬ್ಬ ವ್ಯಕ್ತಿಯು, ತಾನಾಗಿಯೇ ಮಾಡುವುದು ಅಥವಾ ಯಾವೊಬ್ಬ ಇತರ ವ್ಯಕ್ತಿಯಿಂದ ಅಥವಾ ಆತನನ್ನು ಪ್ರಚೋದಿಸುವ ಮೂಲಕವಾಗಿ ಮಾಡುವಂತೆ ಮಾಡುವುದು;

(ಡಿ) "ಅಪರಾಧಿ" ಎಂದರೆ, ಈ ಅಧಿನಿಯಮದ ಯಾವುದೇ ಉಪಬಂಧವನ್ನು ಉಲ್ಲಂಘಿಸಿದ ಅಥವಾ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಅಪರಾಧವನ್ನು ಎಸಗುವಂಥ ಯಾವುದೇ ಕೃತ್ಯವನ್ನು ಮಾಡಿದ ಯಾವೊಬ್ಬ ವ್ಯಕ್ತಿ;

(ಇ) "ವ್ಯಕ್ತಿ" ಎಂದರೆ, ಒಬ್ಬ ಗಂಡು ಅಥವಾ ಹೆಣ್ಣು ಅಥವಾ ಉಭಯಲಿಂಗಿ (Transgender) ಅಥವಾ ನಿಗಮಿತವಾಗಿರುವ ಅಥವಾ ಆಗಿರದ ವ್ಯಕ್ತಿಗಳ ಕಂಪನಿ ಅಥವಾ ಸಂಸ್ಥೆ ಅಥವಾ ನಿಕಾಯ ಇವುಗಳನ್ನು ಒಳಗೊಳ್ಳುತ್ತದೆ;

(ಎಫ್) "ಪ್ರಚಾರ ಮಾಡುವುದು" ಎಂದರೆ, ಅಮಾನವೀಯ, ದುಷ್ಟ ಪದ್ಧತಿಗಳು ಮತ್ತು ವಾಮಾಚಾರಗಳಿಗೆ ಸಂಬಂಧಿಸಿದ ಜಾಹೀರಾತು, ಸಾಹಿತ್ಯ, ಲೇಖನ ಅಥವಾ ಪುಸ್ತಕವನ್ನು ಹೊರಡಿಸುವುದು ಅಥವಾ ಮುದ್ರಿಸುವುದು ಮತ್ತು ಇದು ಅಮಾನವೀಯ, ದುಷ್ಟ ಪದ್ಧತಿಗಳು ಮತ್ತು ವಾಮಾಚಾರಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಪ್ರತ್ಯಕ್ಷ ಅಥವಾ ಪರೋಕ್ಷ ನೆರವು, ದುಷ್ಪ್ರೇರಣೆ, ಭಾಗವಹಿಸುವಿಕೆ ಅಥವಾ ಸಹಕಾರ ಇವು ಒಳಗೊಳ್ಳುತ್ತವೆ;

(ಜಿ) "ಅನುಸೂಚಿ" ಎಂದರೆ, ಈ ಅಧಿನಿಯಮಕ್ಕೆ ಲಗತ್ತಿಸಲಾದ ಅನುಸೂಚಿ;

(ಎಚ್) "ಬಲಿಪಶು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಅಪರಾಧವನ್ನು ಎಸಗಿರುವುದರಿಂದಾಗಿ ದೈಹಿಕವಾಗಿ ಅಥವಾ ಮಾನಸಿಕವಾಗಿ ತೀವ್ರವಾಗಿ ತೊಂದರೆಗೊಳಗಾದ ಅಥವಾ ಯಾರ ಘನತೆಗೆ ಕುಂದುಂಟಾಗುವುದೋ ಆ ವ್ಯಕ್ತಿ;

(2) ಇಲ್ಲಿ ಉಪಯೋಗಿಸಿದ ಆದರೆ ಪರಿಭಾಷಿಸಿರದ ಪದಗಳು ಮತ್ತು ಪದಾವಳಿಗಳು ಅವುಗಳಿಗೆ ಔಷಧಿಗಳು ಮತ್ತು ಐಂದ್ರಜಾಲಿಕ ಪರಿಹಾರಗಳು (ಆಕ್ಷೇಪಾರ್ಹ ಜಾಹೀರಾತುಗಳು) ಅಧಿನಿಯಮ, 1954 (1954ರ ಕೇಂದ್ರ ಅಧಿನಿಯಮ 21) ಮತ್ತು ದಂಡ ಪ್ರಕ್ರಿಯಾ ಸಂಹಿತೆ, 1973 (1974ರ ಕೇಂದ್ರ ಅಧಿನಿಯಮ 2) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅವುಗಳಿಗೆ ಅನುಕ್ರಮವಾಗಿ ನೀಡಲಾದ ಅರ್ಥಗಳನ್ನೇ ಹೊಂದಿರತಕ್ಕದ್ದು.

3. **ಅಮಾನವೀಯ, ದುಷ್ಟ ಪದ್ಧತಿಗಳು ಹಾಗೂ ವಾಮಾಚಾರದ ಪ್ರತಿಬಂಧ ಮತ್ತು ನಿರ್ಮೂಲನೆ.–** (1) ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಅಮಾನವೀಯ, ದುಷ್ಟ ಪದ್ಧತಿಗಳು ಮತ್ತು ವಾಮಾಚಾರಗಳನ್ನು ಯಾವೊಬ್ಬ ವ್ಯಕ್ತಿಯು ತಾನಾಗಿಯೇ ಆಗಲಿ ಅಥವಾ ಮತ್ತೊಬ್ಬ ವ್ಯಕ್ತಿಯ ಮೂಲಕವಾಗಿಯಾಗಲಿ ಮಾಡತಕ್ಕದ್ದಲ್ಲ, ಪ್ರೋತ್ಸಾಹಿಸತಕ್ಕದ್ದಲ್ಲ, ಪ್ರಚಾರ ಮಾಡತಕ್ಕದ್ದಲ್ಲ ಅಥವಾ ಆಚರಿಸತಕ್ಕದ್ದಲ್ಲ ಅಥವಾ ಪ್ರೋತ್ಸಾಹಿಸುವಂತೆ, ಪ್ರಸಾರ ಮಾಡುವಂತೆ ಅಥವಾ ಆಚರಿಸುವಂತೆ ಮಾಡತಕ್ಕದ್ದಲ್ಲ.

(2) ಈ ಅಧಿನಿಯಮವು ಜಾರಿಗೆ ಬಂದ ದಿನಾಂಕದಿಂದ, ಯಾವೊಬ್ಬ ವ್ಯಕ್ತಿಯು ತಾನಾಗಿಯೇ ಅಥವಾ ಯಾವೊಬ್ಬ ಇತರ ವ್ಯಕ್ತಿಯ ಮೂಲಕವಾಗಲಿ, ಈ ಅಧಿನಿಯಮದ ಉಪಬಂಧಗಳ ಉಲ್ಲಂಘನೆಯಲ್ಲಿ ಅಮಾನವೀಯ, ದುಷ್ಟ ಪದ್ಧತಿಗಳು ಮತ್ತು ವಾಮಾಚಾರದ ಯಾವುದೇ ಕೃತ್ಯವನ್ನು ಮಾಡಿದ್ದಲ್ಲಿ ಮತ್ತು ಅಮಾನವೀಯ, ದುಷ್ಟ ಪದ್ಧತಿಗಳು ಮತ್ತು ವಾಮಾಚಾರದ ಯಾವುದೇ ಜಾಹೀರಾತನ್ನು ನೀಡಿದ್ದಲ್ಲಿ, ಮಾಡಿದ ಅಂಥ ಕೃತ್ಯವು ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಅಪರಾಧವಾಗತಕ್ಕದ್ದು ಮತ್ತು ಅಂಥ ಅಪರಾಧದ ತಪ್ಪಿತಸ್ಥ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ, ಒಂದು ವರ್ಷಕ್ಕೆ ಕಡಿಮೆಯಲ್ಲದ ಆದರೆ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ

ಕಾರಾವಾಸದಿಂದ ಮತ್ತು ಐದು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದ ಆದರೆ ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು:

ಪರಂತು, ಈ ಅಧಿನಿಯಮದ ಅಡಿಯಲ್ಲಿಯ ಅಪರಾಧದ ಪರಿಣಾಮವಾಗಿ ಬಲಿಪಶುವಾದವರ ಸಾವು ಸಂಭವಿಸಿದಲ್ಲಿ, ತಪ್ಪಿತಸ್ಥನು ಭಾರತೀಯ ದಂಡ ಸಂಹಿತೆ, 1860ರ (1860ರ ಕೇಂದ್ರ ಅಧಿನಿಯಮ 45) 300ನೇ ಪ್ರಕರಣದಲ್ಲಿ ಪರಿಭಾಷಿಸಿದಂತೆ ಕೊಲೆಯ ಅಪರಾಧವನ್ನು ಎಸಗಿರುವನೆಂದು ಭಾವಿಸತಕ್ಕದ್ದು ಮತ್ತು ಸದರಿ ಸಂಹಿತೆಯ 302ನೇ ಪ್ರಕರಣದ ಅಡಿಯಲ್ಲಿ ದಂಡಿತನಾಗತಕ್ಕದ್ದು ಅಥವಾ ಅಂಥ ಕಾರ್ಯವು ಬಲಿಪಶುವಾದವನ ಜೀವನವನ್ನು ಅಪಾಯದ ಸ್ಥಿತಿಗೆ ತಂದರೆ, ಗಾಯಾಳುವಾಗಲು ಕಾರಣವಾದರೆ, ತಪ್ಪಿತಸ್ಥನು ಭಾರತೀಯ ದಂಡ ಸಂಹಿತೆಯ 307ನೇ ಪ್ರಕರಣದ ಅಡಿಯಲ್ಲಿ ಪರಿಭಾಷಿಸಿದಂತೆ ಕೊಲೆಗೆ ಪ್ರಯತ್ನಿಸಿರುವ ಅಪರಾಧಕ್ಕೆ ಗುರಿಯಾಗಿರುವನೆಂದು ಭಾವಿಸತಕ್ಕದ್ದು ಮತ್ತು ಅದರಂತೆ ದಂಡಿತನಾಗತಕ್ಕದ್ದು ಅಥವಾ ಅಂಥ ಕೃತ್ಯದ ಪರಿಣಾಮವಾಗಿ, ಬಲಿಪಶುವಾದವನು ಆತ್ಮಹತ್ಯೆಯನ್ನು ಮಾಡಿಕೊಂಡಲ್ಲಿ, ತಪ್ಪಿತಸ್ಥನು ಭಾರತೀಯ ದಂಡ ಸಂಹಿತೆಯ 306ನೇ ಪ್ರಕರಣದ ಅಡಿಯಲ್ಲಿ ಪರಿಭಾಷಿಸಿರುವಂತೆ ಆತ್ಮಹತ್ಯೆಗೆ ಪ್ರಚೋದಿಸಿದ ದುಷ್ಪ್ರೇರಣೆಯೆಂದು ಭಾವಿಸತಕ್ಕದ್ದು ಮತ್ತು ಅದರಂತೆ ದಂಡಿತನಾಗತಕ್ಕದ್ದು.

(3) (2)ನೇ ಉಪಪ್ರಕರಣದ ಅಡಿಯಲ್ಲಿ ದಂಡನೀಯವಾದ ಯಾವುದೇ ಕೃತ್ಯ ಅಥವಾ ಅಪರಾಧವನ್ನು ಮಾಡಲು ದುಷ್ಪ್ರೇರೇಪಿಸುವ ಅಥವಾ ಮಾಡುವಂತೆ ಪ್ರಯತ್ನಿಸುವ ಯಾವೊಬ್ಬನನ್ನು, ಆ ಅಪರಾಧವನ್ನು ಎಸಗಿದ್ದಾನೆ ಎಂದು ಭಾವಿಸತಕ್ಕದ್ದು ಮತ್ತು (2)ನೇ ಉಪಪ್ರಕರಣದಲ್ಲಿನ ಅಂಥ ಅಪರಾಧಗಳಿಗೆ ಇರುವ ಅದೇ ದಂಡವನ್ನು ವಿಧಿಸತಕ್ಕದ್ದು.

(4) ಅಪರಾಧಿಯ ಒಪ್ಪಿಗೆಯು ಈ ಪ್ರಕರಣದ ಅಡಿಯಲ್ಲಿ ರಕ್ಷಣಾ ಹೇಳಿಕೆಯಾಗತಕ್ಕದ್ದಲ್ಲ.

(5) (2)ನೇ ಉಪಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು ಮತ್ತು ಜಾಮಿನೀಯವಲ್ಲದ್ದಾಗಿರತಕ್ಕದ್ದು.

4. **ಕಂಪನಿಗಳಿಂದ ಅಪರಾಧಗಳು.-** (1) ಈ ಅಧಿನಿಯಮದ ಅಡಿಯಲ್ಲಿ ಅಪರಾಧವನ್ನು ಮಾಡುವ ವ್ಯಕ್ತಿಯು ನಿಗಮಿತವಾಗಿರುವ ಅಥವಾ ಆಗಿರದ ಒಂದು ಕಂಪನಿಯಾಗಿದ್ದು, ಅಪರಾಧವು ನಡೆದ ಕಾಲದಲ್ಲಿ ಆ ಕಂಪನಿಯ ವ್ಯವಹರಣೆಗಳ ನಿರ್ವಹಣೆಗಾಗಿ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದಕ್ಕೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಕಂಪನಿಯನ್ನು ಆ ಅಪರಾಧದ ದೋಷಿಯೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವರ ವಿರುದ್ಧದ ವ್ಯವಹರಣೆಗೆ ಮತ್ತು ದಂಡನೆಗೆ ಹೊಣೆಯಾಗತಕ್ಕದ್ದು:

ಪರಂತು, ಅಂಥ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವನ್ನು ತಡೆಗಟ್ಟಲು ತಾನು ಯಥೋಚಿತವಾದ ಜಾಗರೂಕತೆಯನ್ನು ವಹಿಸಿದ್ದೆನೆಂದು ಅಂಥ ಯಾವೊಬ್ಬ ವ್ಯಕ್ತಿಯು ರುಜುವಾತುಪಡಿಸಿದರೆ, ಈ ಉಪಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ಈ ಅಧಿನಿಯಮದಲ್ಲಿ ಉಪಬಂಧಿಸಲಾಗಿರುವ ಯಾವುದೇ ಶಿಕ್ಷೆಗೆ ಅಂಥ ವ್ಯಕ್ತಿಯನ್ನು ಹೊಣೆಯಾಗುವಂತೆ ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಅಡಿಯಲ್ಲಿಯ ಒಂದು ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾವೊಬ್ಬ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಅಥವಾ ಅವನ ಕಡೆಯಿಂದಾದ ಯಾವುದೇ ನಿರ್ಲಕ್ಷ್ಯದ ಕಾರಣದಿಂದ ಸಂಭವಿಸಿತೆಂದು ಹೇಳಬಹುದಾದರೆ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ಬಗ್ಗೆ ದೋಷಿಯೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನು ತನ್ನ ವಿರುದ್ಧದ ವ್ಯವಹರಣೆಗೆ ಮತ್ತು ದಂಡನೆಗೆ ಹೊಣೆಯಾಗತಕ್ಕದ್ದು.

**ವಿವರಣೆ.-** ಈ ಪ್ರಕರಣದ ಉದ್ದೇಶಕ್ಕಾಗಿ,-

(ಎ) "ಕಂಪನಿ" ಎಂದರೆ, ಒಂದು ನಿಗಮಿತ ನಿಕಾಯ ಮತ್ತು ಇದು ಒಂದು ಫರ್ಮು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಒಂದು ಫರ್ಮಿನ ಸಂಬಂಧದಲ್ಲಿ "ನಿರ್ದೇಶಕ" ಎಂದರೆ, ಫರ್ಮಿನ ಒಬ್ಬ ಪಾಲುದಾರ.

5. **ಅಪರಾಧಗಳನ್ನು ಅಧಿವಿಚಾರಣೆ ಮಾಡಲು ಅಧಿಕಾರ ವ್ಯಾಪ್ತಿ.-** 3ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧವನ್ನು ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಅಥವಾ ಪ್ರಥಮ ದರ್ಜೆ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್‌ಗೆ ಕಡಿಮೆಯಿರುವ ಯಾವುದೇ ನ್ಯಾಯಾಲಯವು ಅಧಿವಿಚಾರಣೆ ಮಾಡತಕ್ಕದ್ದಲ್ಲ. ಆದರೆ, 3ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿನ ಪರಂತುಕಗಳಲ್ಲಿ ಉಲ್ಲೇಖಿಸಲಾದ, ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಅಪರಾಧಗಳನ್ನು ಸೆಷನ್ ಕೋರ್ಟಿನಲ್ಲಿ ಮಾತ್ರ ಅಧಿವಿಚಾರಣೆ ಮಾಡತಕ್ಕದ್ದು ಮತ್ತು ಅಂಥ ಪ್ರಕರಣಗಳ ಅಧಿವಿಚಾರಣೆಗಾಗಿ ಸಂಹಿತಾ ಪ್ರಕ್ರಿಯೆಯನ್ನು ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯಿಸತಕ್ಕದ್ದು.

6. **ಜಾಗೃತ ಅಧಿಕಾರಿ (ವಿಜಿಲೆನ್ಸ್ ಆಫೀಸರ್).-** (1) ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಮತ್ತು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು,

ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ, ಒಂದು ಅಥವಾ ಹೆಚ್ಚಿನ ಪೊಲೀಸು ಠಾಣೆಗಳಿಗೆ, ಜಾಗೃತ ಅಧಿಕಾರಿಗಳೆಂದು ಕರೆಯಲಾಗುವ ಒಬ್ಬರು ಅಥವಾ ಹೆಚ್ಚಿನ ಪೊಲೀಸು ಅಧಿಕಾರಿಗಳನ್ನು ನೇಮಕ ಮಾಡಬಹುದು:

ಪರಂತು, ಅಂಥ ಅಧಿಕಾರಿಯು ಪೊಲೀಸ್ ಇನ್ಸ್‌ಪೆಕ್ಟರ್ ದರ್ಜೆಗಿಂತ ಕಡಿಮೆಯಲ್ಲದ ಅಧಿಕಾರಿಯಾಗಿರತಕ್ಕದ್ದು.

(2) ಜಾಗೃತ ಅಧಿಕಾರಿಯು ಈ ಮುಂದಿನ ಕರ್ತವ್ಯಗಳನ್ನು ಹೊಂದಿರತಕ್ಕದ್ದು,-

(i) ತನ್ನ ಅಧಿಕಾರ ವ್ಯಾಪ್ತಿಯ ಪ್ರದೇಶದಲ್ಲಿ, ಈ ಅಧಿನಿಯಮ ಮತ್ತು ಅದರಡಿಯಲ್ಲಿ ಮಾಡಲಾದ ನಿಯಮಗಳ ಉಪಬಂಧಗಳ ಉಲ್ಲಂಘನೆ ಅಥವಾ ಭಂಗವನ್ನು ಪತ್ತೆ ಮಾಡುವುದು ಮತ್ತು ಪ್ರತಿಬಂಧಿಸುವುದು ಹಾಗೂ ಆತನ ಅಧಿಕಾರ ವ್ಯಾಪ್ತಿಯ ಪ್ರದೇಶದೊಳಗಿನ ಹತ್ತಿರದ ಪೊಲೀಸ್ ಠಾಣೆಗೆ ಅಂಥ ಪ್ರಕರಣಗಳನ್ನು ವರದಿ ಮಾಡುವುದು; ಮತ್ತು ಯೊವೊಬ್ಬ ಬಾಧಿತ ವ್ಯಕ್ತಿ ಅಥವಾ ಆತನ ಕುಟುಂಬದ ಸದಸ್ಯರು ಪೊಲೀಸ್ ಠಾಣೆಗೆ ದೂರನ್ನು ದಾಖಲಿಸಿದಾಗ, ಅದರ ಯುಕ್ತ ಮತ್ತು ಕ್ಷಿಪ್ರ ಕ್ರಮವನ್ನು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ಸಂಬಂಧಪಟ್ಟ ಪೊಲೀಸ್ ಠಾಣೆಗೆ ಅವಶ್ಯವಾದ ಸಲಹೆ, ಮಾರ್ಗದರ್ಶನ ಮತ್ತು ನೆರವನ್ನು ನೀಡುವುದು;

(ii) ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸುವ ವ್ಯಕ್ತಿಯ ಪರಿಣಾಮಕಾರಿ ಪ್ರಾಸಿಕ್ಯೂಷನ್‌ಗಾಗಿ ಸಾಕ್ಷ್ಯ (evidence) ಸಂಗ್ರಹಿಸುವುದು ಮತ್ತು ಅಂಥ ಉಲ್ಲಂಘನೆಯಾದ ಅಥವಾ ಅಂಥ ಉಲ್ಲಂಘನೆಯನ್ನು ಮಾಡಿದ ಪ್ರದೇಶಗಳ ಪೊಲೀಸು ಠಾಣೆಗೆ ಅದನ್ನು ವರದಿ ಮಾಡುವುದು; ಮತ್ತು

(iii) ರಾಜ್ಯ ಸರ್ಕಾರವು, ಈ ಸಂಬಂಧದಲ್ಲಿ ಹೊರಡಿಸಿದ ಸಾಮಾನ್ಯ ಅಥವಾ ವಿಶೇಷ ಆದೇಶಗಳ ಮೂಲಕ, ಕಾಲಕಾಲಕ್ಕೆ ಆತನಿಗೆ ವಹಿಸಬಹುದಾದ ಅಂತಹುದೇ ಇತರ ಕರ್ತವ್ಯಗಳನ್ನು ನಿರ್ವಹಿಸುವುದು.

(3) (1)ನೇ ಉಪಪ್ರಕರಣದ ಅಡಿಯಲ್ಲಿ ನೇಮಕವಾದ ಜಾಗೃತ ಅಧಿಕಾರಿಯು ಅಧಿಕೃತ ಕರ್ತವ್ಯಗಳನ್ನು ಅಥವಾ ಕಾರ್ಯವನ್ನು ನಿರ್ವಹಿಸಲು ಅಡ್ಡಿ ಉಂಟು ಮಾಡುವ ಯಾವೊಬ್ಬ ಅಧಿಕಾರಿಯು, ಅಪರಾಧ ನಿರ್ಣಯವಾದ ಮೇಲೆ, ಮೂರು ತಿಂಗಳುಗಳ ಅವಧಿಗಾಗಿ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(4) ಜಾಗೃತ ಅಧಿಕಾರಿಯು, ಭಾರತ ದಂಡ ಸಂಹಿತೆ, 1860ರ (1860ರ ಕೇಂದ್ರ ಅಧಿನಿಯಮ 45) 21ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ, ಸಾರ್ವಜನಿಕ ನೌಕರನಾಗಿರತಕ್ಕದ್ದು.

7. **ಪ್ರವೇಶ, ಶೋಧನೆ ಇತ್ಯಾದಿಗಳಿಗೆ ಅಧಿಕಾರಗಳು.**- (1) ರಾಜ್ಯ ಸರ್ಕಾರವು, ಈ ಸಂಬಂಧದಲ್ಲಿ, ಕಾಲಕಾಲಕ್ಕೆ ಹೊರಡಿಸಬಹುದಾದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೆ ಒಳಪಟ್ಟು, ಜಾಗೃತ ಅಧಿಕಾರಿಯು, ತನ್ನ ಅಧಿಕಾರ ವ್ಯಾಪ್ತಿಯ ಪ್ರದೇಶದ ಸ್ಥಳೀಯ ಮಿತಿಗಳೊಳಗೆ, ತನ್ನ ಪ್ರದೇಶದ ಪೊಲೀಸು ಅಧಿಕಾರಿಯ ಸಹಾಯದೊಂದಿಗೆ,-

(i) ಈ ಅಧಿನಿಯಮದ ಅಡಿಯಲ್ಲಿಯ ಅಪರಾಧವಾಗಿದೆ ಅಥವಾ ಅಪರಾಧ ನಡೆಯುತ್ತಿದೆ ಎಂದು ನಂಬಲು ಆತನಿಗೆ ಕಾರಣವಿದ್ದಲ್ಲಿ ಯಾವುದೇ ಸ್ಥಳಕ್ಕೆ, ತಾನು ಅವಶ್ಯವೆಂದು ಪರಿಗಣಿಸುವ ಅಂಥ ಸಹಾಯದೊಂದಿಗೆ, ಎಲ್ಲಾ ಯುಕ್ತ ಸಮಯಗಳಲ್ಲೂ ಪ್ರವೇಶಿಸಬಹುದು ಮತ್ತು ಶೋಧಿಸಬಹುದು;

(ii) ಈ ಅಧಿನಿಯಮದ ಉಪಬಂಧಗಳ ಉಲ್ಲಂಘನೆಯಲ್ಲಿನ ಯಾವುದೇ ಕೃತ್ಯ ಅಥವಾ ಕಾರ್ಯಕ್ಕೆ ಬಳಸಲಾಗಿದೆ ಅಥವಾ ಬಳಸಲಾಗುತ್ತಿದೆ ಎಂದು ನಂಬಲು ಕಾರಣವಿರುವ ಯಾವುದೇ ಸಾಮಾಗ್ರಿ, ಉಪಕರಣ ಅಥವಾ ಜಾಹೀರಾತನ್ನು ಸ್ವಾಧೀನಪಡಿಸಿಕೊಳ್ಳಬಹುದು; ಮತ್ತು

(iii) (i)ನೇ ಖಂಡದಲ್ಲಿ ಹೇಳಲಾದ ಯಾವುದೇ ಸ್ಥಳದಲ್ಲಿ ಸಿಕ್ಕಿದ ಯಾವುದೇ ದಾಖಲೆ, ದಸ್ತಾವೇಜು ಅಥವಾ ಭೌತಿಕ ವಸ್ತುವನ್ನು ಪರೀಕ್ಷಿಸಬಹುದು ಮತ್ತು ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಎಸಗಿರುವುದಕ್ಕೆ ಅದು ಸಾಕ್ಷ್ಯ ಒದಗಿಸುತ್ತದೆ ಎಂದು ನಂಬಲು ಆತನಿಗೆ ಕಾರಣವಿದ್ದರೆ ಅದನ್ನು ಸ್ವಾಧೀನಪಡಿಸಿಕೊಳ್ಳಬಹುದು.

(2) ಸಂಹಿತೆಯ 94ನೇ ಪ್ರಕರಣದ ಅಡಿಯಲ್ಲಿ ಹೊರಡಿಸಿದ ವಾರಂಟಿನ ಆಧಾರದ ಮೇಲೆ ಮಾಡಲಾದ ಅಂಥ ಶೋಧನೆ ಅಥವಾ ಸ್ವಾಧೀನಕ್ಕೆ ಸಂಹಿತೆಯ ಉಪಬಂಧಗಳು ಹೇಗೆ ಅನ್ವಯವಾಗುವುದೋ, ಅದೇ ರೀತಿ, ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ಶೋಧನೆ ಅಥವಾ ಸ್ವಾಧೀನಕ್ಕೆ ಸಾಧ್ಯವಾದಷ್ಟು ಅನ್ವಯವಾಗತಕ್ಕದ್ದು.

(3) (1)ನೇ ಉಪಪ್ರಕರಣದ (ii) ಅಥವಾ (iii)ನೇ ಖಂಡದ ಅಡಿಯಲ್ಲಿ ಯಾವೊಬ್ಬ ವ್ಯಕ್ತಿಯು ಏನನ್ನಾದರೂ ಸ್ವಾಧೀನ ಪಡಿಸಿಕೊಂಡಲ್ಲಿ, ಆತನು ಆದಷ್ಟು ಬೇಗನೆ, ಮ್ಯಾಜಿಸ್ಟ್ರೇಟನಿಗೆ ಅದನ್ನು ತಿಳಿಸತಕ್ಕದ್ದು ಮತ್ತು ಅದರ ಅಭಿರಕ್ಷೆಗಾಗಿ (custody) ಆತನ ಆದೇಶಗಳನ್ನು ತೆಗೆದುಕೊಳ್ಳತಕ್ಕದ್ದು.

8. **ಕರ್ನಾಟಕ ಪೊಲೀಸು ಅಧಿನಿಯಮದ 169 ಮತ್ತು 170ನೇ ಪ್ರಕರಣಗಳ ಉಪಬಂಧಗಳ ಅನ್ವಯ.**- ಈ ಅಧಿನಿಯಮದ ಅಡಿಯಲ್ಲಿ ಜಾಗೃತ ಅಧಿಕಾರಿಯು ಸದ್ಭಾವನೆಯಿಂದ ಮಾಡಿದ ಕಾರ್ಯಗಳಿಗೆ, ಕರ್ನಾಟಕ ಪೊಲೀಸು ಅಧಿನಿಯಮ 1963ರ (1964ರ ಕರ್ನಾಟಕ ಅಧಿನಿಯಮ 4) 169 ಮತ್ತು 170ನೇ ಪ್ರಕರಣದ ಉಪಬಂಧಗಳು, ಆ ಅಧಿನಿಯಮದ ಅರ್ಥವ್ಯಾಪ್ತಿಯೊಳಗೆ ಜಾಗೃತ ಅಧಿಕಾರಿಯು ಪೊಲೀಸು ಅಧಿಕಾರಿಯಾಗಿದ್ದರೆ ಹೇಗೋ ಹಾಗೇ, ಅನ್ವಯವಾಗತಕ್ಕದ್ದು.

9. **ಸಂಹಿತೆಯ ಉಪಬಂಧಗಳ ಅನ್ವಯ.**- ಸಂಹಿತೆಯ ಉಪಬಂಧಗಳು ಈ ಅಧಿನಿಯಮದ ಅಡಿಯಲ್ಲಿನ ಅಪರಾಧಗಳ ತನಿಖೆ ಮತ್ತು ಅಧಿವಿಚಾರಣೆಗೆ ಅನ್ವಯವಾಗತಕ್ಕದ್ದು.

10. **ಅಧಿನಿಯಮವು ಯಾವುದೇ ಇತರ ಕಾನೂನಿಗೆ ಹೆಚ್ಚುವರಿಯಾಗಿರುವುದೇ ಹೊರತು ಅದನ್ನು ಕಡಿಮೆಗೊಳಿಸತಕ್ಕದ್ದಲ್ಲ.**- ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿಗೆ ಹೆಚ್ಚುವರಿಯಾಗಿರತಕ್ಕದ್ದೇ ಹೊರತು ಅದನ್ನು ಕಡಿಮೆಗೊಳಿಸತಕ್ಕದ್ದಲ್ಲ.

11. **ಅಪರಾಧ ನಿರ್ಣಯದ ವಾಸ್ತವಾಂಶದ ಪ್ರಕಟಣೆ.**- (1) ಯಾವೊಬ್ಬ ವ್ಯಕ್ತಿಯು ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧದ ನಿರ್ಣೀತ (convicted) ಅಪರಾಧಿಯಾಗಿದ್ದಲ್ಲಿ, ಈ ಅಧಿನಿಯಮದ ಅಡಿಯಲ್ಲಿನ ಅಪರಾಧಕ್ಕಾಗಿ ಅಂಥ ಅಪರಾಧಿಯನ್ನು, ಅಪರಾಧ ನಿರ್ಣಯ ಮಾಡಲಾಗಿದೆ ಎಂಬ ವಾಸ್ತವಾಂಶದೊಂದಿಗೆ ಮತ್ತು ಶಿಕ್ಷಿಸಲು ಅನುಮತಿ ನೀಡಲು ಯೋಗ್ಯ ಮತ್ತು ಯುಕ್ತವೆಂದು ನ್ಯಾಯಾಲಯವು ಭಾವಿಸುವ ಅಂಥ ಇತರ ವಿವರಗಳೊಂದಿಗೆ, ಪೊಲೀಸರಿಂದ ಶಿಕ್ಷೆಗೊಳಗಾದ ಅಂಥ ವ್ಯಕ್ತಿಯ ಹೆಸರು ಮತ್ತು ನಿವಾಸ ಸ್ಥಳವನ್ನು ಅಂಥ ಅಪರಾಧವು ಎಲ್ಲಿ ನಡೆದಿದೆಯೋ ಅಲ್ಲಿನ ಸ್ಥಳೀಯ ವಾರ್ತಾಪತ್ರಿಕೆಯಲ್ಲಿ ಪ್ರಕಟಿಸುವಂತೆ ಮಾಡಲು ಅಂಥ ಅಪರಾಧವನ್ನು ನಿರ್ಣಯಿಸುವ ನ್ಯಾಯಾಲಯವು ಸಕ್ಷಮವಾಗಿರತಕ್ಕದ್ದು.

(2) ಅಂಥ ದಂಡನಾದೇಶದ ವಿರುದ್ಧ ದಾಖಲು ಮಾಡಿದ ಅಪೀಲು, ಯಾವುದಾದರೂ ಇದ್ದಲ್ಲಿ, ಅದು ಅಂತಿಮವಾಗಿ ವಿಲೆಯಾಗುವವರೆಗೂ (1)ನೇ ಉಪಪ್ರಕರಣದ ಅಡಿಯಲ್ಲಿನ ಅಂಥ ಯಾವುದೇ ಪ್ರಕಟಣೆಯನ್ನು ಮಾಡತಕ್ಕದ್ದಲ್ಲ.

12. **ಅರಿವು ಕಾರ್ಯಕ್ರಮ.**- ಅಮಾನವೀಯ, ದುಷ್ಟ ಪದ್ಧತಿಗಳ ಮತ್ತು ವಾಮಾಚಾರದ ದುಷ್ಪರಿಣಾಮಗಳ ಕುರಿತು ಸಮಾಜದಲ್ಲಿ ಅರಿವನ್ನುಂಟು ಮಾಡಲು ಹಾಗೂ ಹಾನಿಗೊಳಗಾದ ಬಲಿಪಶುಗಳಿಗೆ ಯುಕ್ತ ಮಾರ್ಗಗಳ ಮತ್ತು ನಿಯಮಿಸಬಹುದಾದ ಪ್ರಾಧಿಕಾರಗಳ ಮೂಲಕ ಸರ್ಕಾರಿ ಆಸ್ಪತ್ರೆಗಳಲ್ಲಿ ಸರಿಯಾದ ವೈದ್ಯಕೀಯ ಪರಿಹಾರವನ್ನು ನೀಡಲು ಸರ್ಕಾರವು ಅರಿವು ಕಾರ್ಯಕ್ರಮವನ್ನು ಕೈಗೊಳ್ಳಬಹುದು.

13. **ನಿಯಮಗಳ ರಚನಾಧಿಕಾರ.**- (1) ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಮತ್ತು ಪೂರ್ವ ಪ್ರಕಟಣೆಯ ತರುವಾಯ, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಿರಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಹಾಗೆ ಮಂಡಿಸಲಾದ ಅಧಿವೇಶನ ಅಥವಾ ನಿಕಟ ತರುವಾಯದ ಅಧಿವೇಶನ ಅಥವಾ ಅಧಿವೇಶನಗಳು ಮುಕ್ತಾಯವಾಗುವುದಕ್ಕೆ ಮೊದಲು ಉಭಯ ಸದನಗಳು ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಲು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸತಕ್ಕದ್ದಲ್ಲವೆಂದು ಉಭಯ ಸದನಗಳು ಒಪ್ಪಿದರೆ ಮತ್ತು ತನ್ನ ತೀರ್ಮಾನವನ್ನು ಪರಿಣಾಮಕಾರಿಗೊಳಿಸುವುದಕ್ಕಾಗಿ ರಾಜ್ಯ ಪತ್ರದಲ್ಲಿ ಅಧಿಸೂಚಿಸಿದಲ್ಲಿ, ನಿಯಮವು ರಾಜ್ಯಪತ್ರದಲ್ಲಿ ಅಂಥ ತೀರ್ಮಾನದ ಪ್ರಕಟಿಸಿದ ದಿನಾಂಕದಿಂದ, ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರವಾಗಿ ಪರಿಣಾಮಕಾರಿಯಾತಕ್ಕದ್ದಲ್ಲ. ಆದಾಗ್ಯೂ, ಯಾವುದೇ ಅಂಥ ಮಾರ್ಪಾಡು ಅಥವಾ ರದ್ದತಿಯು ಅ ನಿಯಮದ ಅಡಿಯಲ್ಲಿ ಈ ಮೊದಲು ಮಾಡಲಾದ ಅಥವಾ ಮಾಡಲು ಯಾವುದೇ ಕಾರ್ಯದ ಮಾನ್ಯತೆಗೆ ಬಾಧಕವನ್ನು ಉಂಟುಮಾಡತಕ್ಕದ್ದಲ್ಲ.

14. **ಅನುಸೂಚಿಯ ತಿದ್ದುಪಡಿಗೆ ಅಧಿಕಾರ.**- (1) ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚನೆಯ ಮೂಲಕ ಅನುಸೂಚಿಯನ್ನು ಸೇರಿಸಬಹುದು, ತಿದ್ದುಪಡಿ ಮಾಡಬಹುದು ಅಥವಾ ಮಾರ್ಪಡಿಸಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಅಂಥ ಪ್ರತಿಯೊಂದು ಅಧಿಸೂಚನೆಯನ್ನು ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

15. **ಉಳಿಸುವಿಕೆಗಳು.**- (1) ಸಂದೇಹವನ್ನು ನಿವಾರಿಸುವುದಕ್ಕಾಗಿ, ಈ ಮುಂದಿನವುಗಳ ಸಂಬಂದದಲ್ಲಿ, ಈ ಅಧಿನಿಯಮದಲ್ಲಿರುವುದಾವುದೂ ಅನ್ವಯವಾಗತಕ್ಕದ್ದಲ್ಲ ಎಂದು ಈ ಮೂಲಕ ಘೋಷಿಸಲಾಗಿದೆ, ಎಂದರೆ:-

(i) ಯಾವುದೇ ಧಾರ್ಮಿಕ ಆಧ್ಯಾತ್ಮಿಕ ಸ್ಥಳಗಳಲ್ಲಿ ನಡೆಸುವ ಪ್ರದಕ್ಷಿಣೆ, ಯಾತ್ರೆ, ಪರಿಕ್ರಮದಂಥ ಪೂಜಾ ವಿಧಾನ;

(ii) ಹರಿಕಥೆ, ಕೀರ್ತನೆ, ಪ್ರವಚನ, ಭಜನೆ, ಪ್ರಾಚೀನ ಮತ್ತು ಪಾರಂಪರಿಕ ಕಲಿಕೆಗಳು ಹಾಗೂ ಕಲೆಗಳು, ಪದ್ಧತಿ, ಅದರ ಪ್ರಸಾರ ಮತ್ತು ಪರಿಚಲನೆ;

(iii) ದೈವಾಧೀನರಾದ ಸಂತರ ಪವಾಡದ ಬಗ್ಗೆ ಮಾತನಾಡುವುದು, ಅದನ್ನು ಪ್ರಸಾರ ಮಾಡುವುದು, ಪ್ರಚಾರ ಮಾಡುವುದು, ಪರಿಚಲನೆ ಮಾಡುವುದು ಮತ್ತು ದೈಹಿಕವಾಗಿ ಹಾನಿಯುಂಟು ಮಾಡದಿರುವ ಧಾರ್ಮಿಕ ಬೋಧಕರ ಪವಾಡಗಳ ಬಗ್ಗೆ ಸಾಹಿತ್ಯವನ್ನು ಪ್ರಸಾರ ಮಾಡುವುದು, ಪ್ರಚಾರ ಮಾಡುವುದು ಮತ್ತು ಹಂಚುವುದು;

(iv) ಮನೆ, ದೇವಾಲಯ, ದರ್ಗಾ, ಗುರುದ್ವಾರ, ಪಗೋಡ, ಚರ್ಚ್ ಮತ್ತು ಅಂಥ ಇತರ ಧಾರ್ಮಿಕ ಸ್ಥಳಗಳಲ್ಲಿ ದೈಹಿಕವಾಗಿ ಹಾನಿಯುಂಟು ಮಾಡದಿರುವ ಪ್ರಾರ್ಥನೆ, ಉಪಾಸನೆ ಮತ್ತು ಎಲ್ಲಾ ಧಾರ್ಮಿಕ ಆಚರಣೆಗಳನ್ನು ನಡೆಸುವುದು;

(v) ಎಲ್ಲಾ ಧಾರ್ಮಿಕ ಸಂಭ್ರಮಾಚರಣೆಗಳು, ಹಬ್ಬಗಳು, ಪ್ರಾರ್ಥನೆಗಳು, ಮೆರವಣಿಗೆ ಹಾಗೂ ಅದಕ್ಕೆ ಸಂಬಂಧಿಸಿದ ಯಾವುದೇ ಇತರ ಕೃತ್ಯ ಮತ್ತು ಇತರ ಎಲ್ಲಾ ಆಚರಣೆಗಳು.

(vi) ಧರ್ಮಾಚರಣೆಗಳಿಗೆ ಅನುಸಾರವಾಗಿ ಮಕ್ಕಳ ಕಿವಿಗಳು, ಮೂಗು ಚುಚ್ಚುವುದು ಮತ್ತು ಕಾದ ಮುದ್ರಧಾರಣೆ ಹಾಗೂ ಜೈನ ಸಂಪ್ರದಾಯದ ಕೇಶಲೋಚನದಂಥ ಧಾರ್ಮಿಕ ಆಚರಣೆ;

(vii) ವಾಸ್ತುಶಾಸ್ತ್ರದ ಕುರಿತು ಸಲಹೆ, ಜ್ಯೋತಿಷ್ಯ ಮತ್ತು ಇತರ ಜ್ಯೋತಿಷಿಗಳಿಂದ ಸಲಹೆ;

(viii) ಮೇಲೆ ಹೇಳಿದುದನ್ನು ಹೊರತುಪಡಿಸಿ ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದ ಯಾವುದೇ ಸಾಂಪ್ರದಾಯಿಕ ಧಾರ್ಮಿಕ ವಿಧಿಗಳು ಮತ್ತು ಕೃತ್ಯಗಳು.

(2) (1)ನೇ ಉಪಪ್ರಕರಣದ (viii) ನೇ ಖಂಡದ ಅನುಸಾರವಾಗಿ ಹೊರಡಿಸಲಾದ ಪ್ರತಿಯೊಂದು ಅಧಿಸೂಚನೆಯನ್ನು ಆದಷ್ಟು ಬೇಗನೇ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

**16. ತೊಂದರೆಗಳ ನಿವಾರಣೆಗೆ ಅಧಿಕಾರ.-** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಸಂಬಂಧದಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದಂತೆ ತೊಂದರೆಯ ನಿವಾರಣೆಗಾಗಿ ಅವಶ್ಯಕ ಹಾಗೂ ಸಮಂಜಸವೆಂದು ತನಗೆ ಕಂಡುಬರುವಂಥ ಉಪಬಂಧಗಳನ್ನು ರಚಿಸಬಹುದು.

(2) ಈ ಉಪಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶವನ್ನು ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

**ಅನುಸೂಚಿ**

**(2(1)(ಜಿ) ಪ್ರಕರಣವನ್ನು ನೋಡಿ)**

(1) ಭಾನಾಮತಿಯ, ಮಾಟಮಂತ್ರದ ಹೆಸರಿನಲ್ಲಿ ಮೌಲ್ಯಯುತ ವಸ್ತುಗಳು, ಗುಪ್ತ-ನಿಧಿನಿಕ್ಷೇಪ (bounty) ಮತ್ತು ಬಚ್ಚಿಟ್ಟ ನಿಧಿಗಳನ್ನು ಹುಡುಕುವುದಕ್ಕೆ ಅಥವಾ ಅಂತಹುದೇ ಕಾರಣಗಳಿಗಾಗಿ ಅಮಾನವೀಯ, ದುಷ್ಟ ಕೃತ್ಯ ಮತ್ತು ವಾಮಾಚಾರ ಮಾಡುವುದು, ಯಾವೊಬ್ಬ ವ್ಯಕ್ತಿಯ ಮೇಲೆ ಹಲ್ಲೆ ಮಾಡುವುದು, ಬೆತ್ತಲೆ ಮೆರವಣಿಗೆ ಅಥವಾ ಆತನ ದೈನಂದಿನ ಚಟುವಟಿಕೆಗಳ ಮೇಲೆ ನಿಷೇಧ ಹಾಕುವುದು ಅಥವಾ ಅಂಥ ಅಮಾನವೀಯ ಕೃತ್ಯಗಳನ್ನು ಮಾಡಲು ಪ್ರಚೋದಿಸುವುದು, ಸಲಹೆ ನೀಡುವುದು ಅಥವಾ ಪ್ರೋತ್ಸಾಹಿಸುವುದು;

(2) ಇಂದ್ರಿಯಗಳಲ್ಲಿ ಅನಿರೀಕ್ಷಿತ ಶಕ್ತಿಯನ್ನು ಒಬ್ಬನ ದೇಹದಲ್ಲಿ ಆಹ್ವಾನಿಸಲಾಗಿದೆ ಅಥವಾ ಆ ವ್ಯಕ್ತಿಯು ಅಂಥ ಶಕ್ತಿಯನ್ನು ಹೊಂದಿದ್ದಾನೆಂದು ಘೋಷಿಸುವ ಮೂಲಕ ಪ್ರಭಾವವನ್ನು ಸೃಷ್ಟಿಸಿ, ಅಂಥ ವ್ಯಕ್ತಿಯ ಸಲಹೆಯನ್ನು ಅನುಸರಿಸದಿದ್ದಲ್ಲಿ ದುಷ್ಟ ಪರಿಣಾಮಗಳಾಗುತ್ತವೆ ಎಂದು ಇತರರ ಮನಸ್ಸಿನಲ್ಲಿ ಭಯ ಮೂಡಿಸುವುದು ಅಥವಾ ಹೆದರಿಸುವುದು ಅಥವಾ ವಂಚನೆ ಮಾಡುವುದು, ಮೋಸ ಮಾಡುವುದು ಮತ್ತು ಆತನನ್ನು ನಿರ್ಬಂಧಿಸುವುದು;

(3) ದೆವ್ವವನ್ನು ಉಚ್ಚಾಟನೆ ಮಾಡುವ ನೆಪದಲ್ಲಿ, ಒಬ್ಬ ವ್ಯಕ್ತಿಯನ್ನು ಪಾದರಕ್ಷೆಯನ್ನು ಅದ್ದಿದ ನೀರನ್ನು ವ್ಯಕ್ತಿಗೆ ಕುಡಿಯುವಂತೆ ಮಾಡಲು ಹಗ್ಗ ಅಥವಾ ಸರಪಳಿಯಿಂದ ಕಟ್ಟುವುದು, ಕೋಲು ಅಥವಾ ಚಾಟಿಯಿಂದ ಹೊಡೆಯುವುದು, ಮೆಣಸಿನ ಕಾಯಿ ಹೊಗೆಯನ್ನು ಕೊಡುವುದು, ಹಗ್ಗದಿಂದ ಅಥವಾ ಕೂದಲಿನಿಂದ

ಕಟ್ಟುವ ಮೂಲಕ ವ್ಯಕ್ತಿಯನ್ನು ಛಾವಣಿಗೆ ನೇತು ಹಾಕುವುದು ಅಥವಾ ಆತನ ಕೂದಲನ್ನು ಕೀಳುವುದು, ವ್ಯಕ್ತಿಯ ಅಂಗಗಳಿಗೆ ಅಥವಾ ದೇಹಕ್ಕೆ ಬಿಸಿ ಮಾಡಿದ ವಸ್ತುವನ್ನು ಮುಟ್ಟಿಸುವುದರ ಮೂಲಕ ಆತನಿಗೆ ನೋವುಂಟು ಮಾಡುವುದು, ಸಾರ್ವಜನಿಕವಾಗಿ ಲೈಂಗಿಕ ಕೃತ್ಯವನ್ನು ಮಾಡುವಂತೆ ವ್ಯಕ್ತಿಯನ್ನು ಒತ್ತಾಯ ಮಾಡುವುದು, ಅಮಾನವೀಯ ಕೃತ್ಯಗಳನ್ನು ಆಚರಿಸುವ, ವ್ಯಕ್ತಿಯ ಬಾಯಿಯಲ್ಲಿ ಬಲವಂತವಾಗಿ ಮೂತ್ರ ಅಥವಾ ಮಾನವ ಮಲವನ್ನು (ಅಮೇಧ್ಯ) ಹಾಕುವುದು ಅಥವಾ ಯಾವುದೇ ಅಂಥ ಕೃತ್ಯಗಳನ್ನು ಆಚರಿಸುವುದು;

(4) ನಿರ್ದಿಷ್ಟ ವ್ಯಕ್ತಿಯೊಬ್ಬನು ಭಾನಾಮತಿ, ಮಾಟ-ಮಂತ್ರ, ವಾಮಾಚಾರ ಮಾಡುತ್ತಿದ್ದಾನೆ ಅಥವಾ ದೆವ್ವದ ಪ್ರಭಾವಕ್ಕೆ ಒಳಪಡಿಸುತ್ತಾನೆ ಅಥವಾ ಮಂತ್ರ-ತಂತ್ರದ ಮೂಲಕ ಜಾನುವಾರುಗಳ ಹಾಲು ಕೊಡುವ ಸಾಮರ್ಥ್ಯವನ್ನು ತಗ್ಗಿಸುತ್ತಾನೆ ಅಥವಾ ಅದೇ ರೀತಿಯಲ್ಲಿ ಒಬ್ಬ ನಿರ್ದಿಷ್ಟ ವ್ಯಕ್ತಿಯನ್ನು ಆತನು ಇತರರನ್ನು ದುರಾದೃಷ್ಟಕ್ಕೆ ತಳ್ಳುತ್ತಾನೆ ಅಥವಾ ಆತನು ರೋಗಗಳನ್ನು ಹರಡಲು ಕಾರಣನಾಗಿದ್ದಾನೆ ಎಂದು ಆರೋಪಿಸುವುದು ಮತ್ತು ಆ ಮೂಲಕ ಅಂಥ ವ್ಯಕ್ತಿಯ ಜೀವನವನ್ನು ಸಂಕಟಕ್ಕೀಡು ಮಾಡುವುದು, ತ್ರಾಸದಾಯಕವಾಗಿಸುವುದು ಅಥವಾ ತೊಂದರೆಗೀಡು ಮಾಡುವುದು; ಒಬ್ಬ ವ್ಯಕ್ತಿಯನ್ನು ಸೈತಾನ ಅಥವಾ ಸೈತಾನನ ಅವತಾರವೆಂದು ಘೋಷಿಸುವುದು;

(5) ದೆವ್ವ ಅಥವಾ ಮಂತ್ರಗಳನ್ನು ಆಹ್ವಾನಿಸುವ ಮೂಲಕ ಸಾಮಾನ್ಯ ಜನರ ಮನಸ್ಸಿನಲ್ಲಿ ಗಾಬರಿಯನ್ನು ಹುಟ್ಟಿಸುವುದು ಅಥವಾ ದೈಹಿಕ ಗಾಯಗಳನ್ನು ಮಾಡುವ ಮೂಲಕ ಇಂದ್ರಿಯಗಳಿಗೆ ಗೋಚರವಾಗದ ದೆವ್ವದಂಥ ಅಥವಾ ಕ್ಷುದ್ರ ಶಕ್ತಿಯಿದೆ ಎಂಬ ಭಾವನೆಯನ್ನು ಸೃಷ್ಟಿಸುವುದು ಮತ್ತು ಒಬ್ಬ ವ್ಯಕ್ತಿಯನ್ನು ವೈದ್ಯಕೀಯ ಚಿಕಿತ್ಸೆಯನ್ನು ತೆಗೆದುಕೊಳ್ಳುವುದರಿಂದ ಪ್ರತಿಬಂಧಿಸುವುದು ಹಾಗೂ ಅದಕ್ಕೆ ಬದಲಾಗಿ, ಅಮಾನವೀಯ, ದುಷ್ಟ ಮತ್ತು ಅಘೋರಿ ಕೃತ್ಯಗಳನ್ನು ಆಚರಿಸುವಂತೆ ಅಥವಾ ಚಿಕಿತ್ಸೆಯನ್ನು ಪಡೆಯುವಂತೆ ಆತನನ್ನು ಮಾರ್ಗಪಲ್ಲಟಗೊಳಿಸುವುದು, ವಾಮಾಚಾರ ಅಥವಾ ಅಮಾನವೀಯ ಕೃತ್ಯವನ್ನು ಆಚರಿಸುವ ಅಥವಾ ಆಚರಿಸುವುದಕ್ಕೆ ಪ್ರವೃತ್ತನಾಗುವ ಮೂಲಕ ಸಾವಿನ ಅಥವಾ ದೈಹಿಕ ನೋವುಗಳನ್ನು ಉಂಟುಮಾಡುವ ಅಥವಾ ಆರ್ಥಿಕ ನಷ್ಟವನ್ನುಂಟು ಮಾಡುವ ಭಯವನ್ನು ಒಬ್ಬ ವ್ಯಕ್ತಿಯಲ್ಲಿ ಉಂಟು ಮಾಡುವುದು;

(6) ಶಸ್ತ್ರ ಚಿಕಿತ್ಸೆಯನ್ನು ಬೆರಳುಗಳ ಮೂಲಕ ಮಾಡುವುದಾಗಿ ಹೇಳಿಕೊಳ್ಳುವುದು ಅಥವಾ ಮಹಿಳೆಯ ಗರ್ಭದಲ್ಲಿನ ಭ್ರೂಣದ ಲಿಂಗವನ್ನು ಬದಲಾಯಿಸಲಾಗುವುದು ಎಂದು ಹೇಳಿಕೊಳ್ಳುವುದು;

(7) ತನ್ನಲ್ಲಿಯೇ ವಿಶೇಷ ಅಲೌಕಿಕ ಶಕ್ತಿಯಿದೆ ಮತ್ತೊಬ್ಬ ವ್ಯಕ್ತಿಯ ಅಥವಾ ಪವಿತ್ರಾತ್ಮದ ಅವತಾರ ಅಥವಾ ಆತನ ಹಿಂದಿನ ಜನ್ಮದಲ್ಲಿನ ಪತ್ನಿ, ಪತಿ ಅಥವಾ ಅನೈತಿಕ ಸಂಬಂಧವಿದ್ದ ಪ್ರೇಮಿ ಆಗಿದ್ದೆವೆಂಬ ಭಾವನೆಯನ್ನು ಸೃಷ್ಟಿಸುವುದು ಮತ್ತು ಆ ಮೂಲಕ ಅಂಥ ವ್ಯಕ್ತಿಯೊಂದಿಗೆ ಲೈಂಗಿಕ ಚಟುವಟಿಕೆಯಲ್ಲಿ ತೊಡಗುವುದು;

(8) ಕೊಕ್ಕೆಯಿಂದ ನೇತುಹಾಕುವುದು, ದೇಹದೊಳಗೆ ತೂರಿಸುವುದು (ಸಿಡಿ) ಅಥವಾ ದೇಹಕ್ಕೆ ಚುಚ್ಚಿಕೊಂಡ ಕೊಕ್ಕೆಯ ಮೂಲಕ ತೇರನ್ನು ಎಳೆಯುವುದು ಇಂಥ ಸ್ವಯಂಕೃತ ಗಾಯಗಳು ಆಗುವುದನ್ನು ಒಳಗೊಳ್ಳುವ ಆಚರಣೆಗಳನ್ನು ಮಾಡುವಂತೆ ಮನವೊಲಿಸುವುದು, ಪ್ರಸಾರಮಾಡುವುದು ಅಥವಾ ಅದಕ್ಕೆ ಅನುಕೂಲ ಕಲ್ಪಿಸುವುದು;

(9) ಮಕ್ಕಳಿಗೆ ಚಿಕಿತ್ಸೆ ನೀಡುವ ಹೆಸರಿನಲ್ಲಿ ಅವರಿಗೆ ಹಾನಿಯುಂಟುಮಾಡುವ ಎಂದರೆ ಅವರನ್ನು ಮುಳ್ಳುಗಳ ಮೇಲೆ ಅಥವಾ ಎತ್ತರದಿಂದ ಎಸೆಯುವುದು ಇಂಥವುಗಳನ್ನು ಒಳಗೊಳ್ಳುವ ಆಚರಣೆಗಳನ್ನು ಮಾಡುವಂತೆ ಮನವೊಲಿಸುವುದು, ಪ್ರಸಾರಮಾಡುವುದು ಅಥವಾ ಅದಕ್ಕೆ ಅನುಕೂಲ ಕಲ್ಪಿಸುವುದು;

(10) ಪ್ರತ್ಯೇಕವಾಗಿರುವಂತೆ ಒತ್ತಾಯಿಸುವ, ಗ್ರಾಮದೊಳಗೆ ಪುನರ್-ಪ್ರವೇಶವನ್ನು ನಿಷೇಧಿಸುವ ಮೂಲಕ ಮಹಿಳೆಯರ ವಿರುದ್ಧ ದುಷ್ಟಪದ್ಧತಿಗಳನ್ನು ಆಚರಿಸುವುದು ಅಥವಾ ಋತುಮತಿಯಾದ ಅಥವಾ ಬಾಣಂತಿಯಾದ ಸ್ತ್ರೀಯನ್ನು ಒಂಟಿಯಾಗಿರುವಂತೆ ಮಾಡುವುದು; ಮತ್ತು "ಬೆತ್ತಲೆ ಸೇವೆಯಂಥ" ಪೂಜೆ ಅಥವಾ ಇತರ ಹೆಸರಿನಲ್ಲಿ ಮಹಿಳೆಯರನ್ನು ಬೆತ್ತಲೆಯಾಗಿ ಮೆರವಣಿಗೆ ಮಾಡುವಂಥ ಅಮಾನವೀಯ ಮತ್ತು ಅವಮಾನಕರ ಪದ್ಧತಿಗಳಿಗೆ ಮಹಿಳೆಯರನ್ನು ಒಳಪಡಿಸುವುದು;

(11) ಸಾರ್ವಜನಿಕರಿಗೆ ಪೀಡೆಯುಂಟುಮಾಡುವ, ಪ್ರಾಣಿಯನ್ನು ಅದರ ಕುತ್ತಿಗೆಯನ್ನು ಕಚ್ಚುವ ಮೂಲಕ ಕೊಲ್ಲುವಂಥ (ಗಾವು) ದುಷ್ಟಪದ್ಧತಿಗಳನ್ನು ನಡೆಸುವಂತೆ ಯಾವೊಬ್ಬ ವ್ಯಕ್ತಿಯನ್ನು ಒತ್ತಾಯಪಡಿಸುವುದು;

(12) ಮಾನವನ ಘನತೆಗೆ ಕುಂದುಂಟು ಮಾಡುವ, ಸಾರ್ವಜನಿಕ ಅಥವಾ/ಮತ್ತು ಧಾರ್ಮಿಕ ಸ್ಥಳಗಳಲ್ಲಿ ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ಇತರ ವ್ಯಕ್ತಿಗಳು ಉಳಿಸಿದ ಎಂಜಲು ಎಲೆಗಳ ಮೇಲೆ ಹೊರಳಾಡುವುದು (ಉರುಳು ಸೇವೆ) ಅಥವಾ ಅಂಥದೇ ಪದ್ಧತಿಗಳನ್ನು ಪ್ರೋತ್ಸಾಹಿಸುವುದು;

(13) ಜಾತ್ರೆಗಳು ಮತ್ತು ಧಾರ್ಮಿಕ ಹಬ್ಬಗಳ ಸಮಯದಲ್ಲಿ ದೈಹಿಕವಾಗಿ ಗಾಯವನ್ನು ಉಂಟುಮಾಡುವಂಥ ಕೆಂಡ ಹಾಯುವ ಪದ್ಧತಿಯನ್ನು ಮಾಡುವಂತೆ ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ಬಲವಂತ ಮಾಡುವುದು;

(14) "ಬಾಯಿಬೀಗ" ಪದ್ಧತಿ ಎಂದರೆ, ನಾಲಿಗೆಯೂ ಸೇರಿದಂತೆ ಒಂದು ದವಡೆಯಿಂದ ಇನ್ನೊಂದು ದವಡೆಗೆ ಕಬ್ಬಿಣದ ಸಲಾಕೆಗಳನ್ನು ತೂರಿಸುವ ಪದ್ಧತಿ;

(15) ವಾಸಿಸುವ ಮನೆಗಳ ಮೇಲೆ ಭಾನಾಮತಿ, ಮಾಟ-ಮಂತ್ರ ಮತ್ತು ಮಂತ್ರ-ತಂತ್ರದ ಹೆಸರಿನಲ್ಲಿ ರಾತ್ರಿ ಅಥವಾ ಬೆಳಗಿನ ವೇಳೆಯಲ್ಲಿ ಕಲ್ಲುಗಳನ್ನು ಎಸೆಯುವುದು;

(16) ನಾಯಿ ಅಥವಾ ಹಾವು ಅಥವಾ ಚೇಳಿನ ಕಡಿತಕ್ಕೆ ವೈದ್ಯಕೀಯ ಚಿಕಿತ್ಸೆಯನ್ನು ತೆಗೆದುಕೊಳ್ಳುವುದರಿಂದ ಒಬ್ಬ ವ್ಯಕ್ತಿಯನ್ನು ನಿಷೇಧಿಸುವುದು ಮತ್ತು ಪ್ರತಿಬಂಧಿಸುವುದು ಹಾಗೂ ಅದಕ್ಕೆ ಬದಲಾಗಿ ಆತನಿಗೆ ಮಂತ್ರ-ತಂತ್ರ, ಗಂಧ-ದೋರ ಅಥವಾ ಅಂಥ ಇತರ ವಸ್ತುಗಳಂಥ ಚಿಕಿತ್ಸೆಯನ್ನು ನೀಡುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ದ್ವಾರಕನಾಥ್ ಬಾಬು
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳ ಇಲಾಖೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 1000